# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **480** |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21-02-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ಎಷ್ಟು ವಿದ್ಯುತ್ ಪರಿವರ್ತಕ (ಟಿ.ಸಿ) ಸುಟ್ಟಿರುವ ಬಗ್ಗೆ ಎಷ್ಟು ದೂರು ಸ್ವೀಕೃತವಾಗಿರುತ್ತವೆ ಹಾಗೂ ವಿದ್ಯುತ್ ಪರಿವರ್ತಕ (ಟಿ.ಸಿ) ಬದಲಾಯಿಸಲು ನಿಗದಿಪಡಿಸಿರುವ ಕಾಲಾವಧಿ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ವಿಫಲವಾಗಿರುವ ಪರಿವರ್ತಕಗಳ ದೂರು ದಾಖಲಾಗಿದ್ದು, ಅವುಗಳ ವಿವರಗಳು ಕೆಳಕಂಡಂತಿವೆ:- |
| ಆ) | ಅವುಗಳಲ್ಲಿ ಇಲ್ಲಿಯವರೆಗೆ ಎಷ್ಟು ವಿದ್ಯುತ್ ಪರಿವರ್ತಕ (ಟಿ.ಸಿ) ಗಳನ್ನು ಬದಲಾಯಿಸಲಾಗಿದೆ; ಅವುಗಳಿಗೆ ಮಾಡಿರುವ ವೆಚ್ಚವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಮಾರ್ಚ್ 2021ರ ಅಂತ್ಯಕ್ಕೆ ಬದಲಾಯಿಸಲು ಬಾಕಿ ಇದ್ದ 23 ಸಂಖ್ಯೆಯ ಪರಿವರ್ತಕಗಳೂ ಸೇರಿದಂತೆ ಒಟ್ಟು 5829 ಪರಿವರ್ತಕಗಳನ್ನು ಈ ಹಿಂದೆಯೇ ಬದಲಾಯಿಸಲಾಗಿದ್ದು, ಅವುಗಳನ್ನು ಬದಲಾಯಿಸಲು ತಗುಲಿದ ವೆಚ್ಚದ ತಾಲ್ಲೂಕುವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| | | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದಂತೆ ವಿಫಲವಾದ ಪರಿವರ್ತಕಗಳನ್ನು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ 24 ಗಂಟೆಯೊಳಗಾಗಿ ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಪರಿವರ್ತಕಗಳನ್ನು 72 ಗಂಟೆಯೊಳಗಾಗಿ ಬದಲಾಯಿಸಬೇಕಾಗಿದೆ. ಹೀಗಿದ್ದರೂ, ಪ್ರಸ್ತುತ ವಿಫಲಗೊಂಡ ಪರಿವರ್ತಕಗಳನ್ನು 24 ಗಂಟೆಗಳೊಳಗೆ ಬದಲಾಯಿಸಲು ಕ್ರಮ ವಹಿಸಲಾಗುತ್ತಿದೆ. |

| ಮಾರ್ಚ್ 2020ರ ಅಂತ್ಯಕ್ಕೆ ಬದಲಾಯಿಸಲು ಬಾಕಿ ಇದ್ದ ಪರಿವರ್ತಕಗಳ ಸಂಖ್ಯೆ | 2020-21ನೇ ಸಾಲಿನಲ್ಲಿ ವಿಫಲವಾದ ಪರಿವರ್ತಕಗಳ ಸಂಖ್ಯೆ | 2020-21ನೇ ಸಾಲಿನಲ್ಲಿ ಬದಲಾಯಿಸಲಾದ ಪರಿವರ್ತಕಗಳ ಸಂಖ್ಯೆ | ಮಾರ್ಚ್ 2021ರ ಅಂತ್ಯಕ್ಕೆ ಬದಲಾಯಿಸಲು ಬಾಕಿ ಇದ್ದ ಪರಿವರ್ತಕಗಳ ಸಂಖ್ಯೆ |
|---|---|---|---|
| 16 | 5813 | 5806 | 23 |

...2

| | | |
|---|---|---|
| ಇ) | 2020-21ನೇ ಸಾಲಿನಲ್ಲಿ ಬೆಳಕು ಯೋಜನೆ ಯಡಿಯಲ್ಲಿ ಎಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಮತ್ತು ತಗುಲಿರುವ ವೆಚ್ಚವೆಷ್ಟು; (ವಿವರ ನೀಡುವುದು) | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಬೆಳಕು ಯೋಜನೆಯು ಸೆಪ್ಟೆಂಬರ್ 2021 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯಡಿ 2021-22ನೇ ಸಾಲಿನ ಜನವರಿ 22ರ ಅಂತ್ಯಕ್ಕೆ ಒಟ್ಟು 23586 ಸಂಖ್ಯೆಯ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮನೆಗಳಿಗೆ ರೂ.8.25 ಕೋಟಿ ರೂ.ಗಳ ವೆಚ್ಚದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಅವುಗಳ ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ. |

| ಕ್ರ. ಸಂ | ಜಿಲ್ಲೆ | ಬೆಳಕು ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಿದ ಮನೆಗಳ ಸಂಖ್ಯೆ | ವೆಚ್ಚ (ರೂ. ಕೋಟಿ ಗಳಲ್ಲಿ) |
|---|---|---|---|
| 1 | ಕಲಬುರಗಿ | 7348 | 2.57 |
| 2 | ಯಾದಗಿರಿ | 1840 | 0.64 |
| 3 | ಬೀದರ್ | 5253 | 1.84 |
| 4 | ಬಳ್ಳಾರಿ | 1620 | 0.57 |
| 5 | ವಿಜಯನಗರ | 1852 | 0.65 |
| 6 | ರಾಯಚೂರು | 2924 | 1.02 |
| 7 | ಕೊಪ್ಪಳ | 2749 | 0.96 |
| ಒಟ್ಟು | | 23586 | 8.25 |

| | | |
|---|---|---|
| ಈ) | 2020-21ನೇ ಸಾಲಿನಲ್ಲಿ ಬೆಳಕು ಯೋಜನೆ ಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳೇನು? (ವಿವರ ನೀಡುವುದು) | ದಿನಾಂಕ: 29-09-2021 ರ ಸರ್ಕಾರಿ ಆದೇಶ ಸಂಖ್ಯೆ ಎನರ್ಜಿ/606/ವಿಎಸ್‌ಸಿ/2021 ಬೆಂಗಳೂರು ಪ್ರಕಾರ ರಾಜ್ಯದಲ್ಲಿ ಪ್ರಸ್ತುತ ವಿದ್ಯುತ್ ಸಂಪರ್ಕ ಇಲ್ಲದಿರುವ ಕುಟುಂಬದ ಮನೆಗಳಿಗೆ ದೀನ ದಯಾಳ ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆ (ಡಿಡಿಯುಜಿಜೆವೈ) ಹಾಗೂ ಸೌಭಾಗ್ಯ ಯೋಜನೆಗಳ ಮಾದರಿಯಲ್ಲಿಯೇ ಅವಶ್ಯಕವಿರುವ ದಾಖಲಾತಿಗಳಾದ ರೇಷನ್ ಕಾರ್ಡ್, ಆಧಾರ್ ಕಾರ್ಡ್, ವೋಟರ್ ಐಡಿ, ಗ್ರಾಮ ಪಂಚಾಯತಿಯಿಂದ ಒದಗಿಸುವ ಪಟ್ಟಿ ಅಥವಾ ಇನ್ನಿತರೆ ದಾಖಲಾತಿಗಳನ್ನು ಪರಿಗಣಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. |

ಸಂಖ್ಯೆ: ಎನರ್ಜಿ 21 ಇಬಿಎಸ್ 2022

(ವಿ.ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

# ಅನುಬಂಧ

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2020-21ರ ಸಾಲಿನಲ್ಲಿ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲು ತಗುಲಿದ ವೆಚ್ಚದ ತಾಲ್ಲೂಕುವಾರು ವಿವರಗಳು

### ಕಲಬುರಗಿ ಜಿಲ್ಲೆ

| ಕ್ರ.ಸಂ. | ತಾಲ್ಲೂಕು | ಬದಲಾಯಿಸಿದ ಪರಿವರ್ತಕಗಳ ಸಂಖ್ಯೆ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|
| 1 | ಕಲಬುರಗಿ ನಗರ | 330 | 99.29 |
| 2 | ಕಲಬುರಗಿ ಗ್ರಾಮೀಣ | 540 | 79.46 |
| 3 | ಆಳಂದ | 721 | 109.60 |
| 4 | ಅಫಜಲಪುರ | 724 | 112.37 |
| 5 | ಜೇವರ್ಗಿ | 333 | 66.92 |
| 6 | ಯಾಡ್ರಾಮಿ | 155 | 30.31 |
| 7 | ಚಿತ್ತಾಪುರ | 103 | 20.96 |
| 8 | ಶಹಾಬಾದ | 269 | 59.82 |
| 9 | ಕಾಳಗಿ | 96 | 19.02 |
| 10 | ಸೇಡಂ | 258 | 41.35 |
| 11 | ಚಿಂಚೋಳಿ | 370 | 58.56 |
| | ಒಟ್ಟು | 3899 | 697.66 |

### ಯಾದಗಿರಿ ಜಿಲ್ಲೆ

| | | | |
|---|---|---|---|
| 1 | ಗುರುಮಿಠಕಲ್ | 323 | 61.64 |
| 2 | ಯಾದಗಿರಿ | 473 | 91.94 |
| 3 | ಶಹಾಪೂರ್ | 437 | 31.54 |
| 4 | ವಡಗೆರಿ | 148 | 69.86 |
| 5 | ಶೋರಾಪುರ್ | 389 | 81.86 |
| 6 | ಹುಣಸಗಿ | 160 | 27.41 |
| | ಒಟ್ಟು | 1930 | 364.25 |